ಓ.ಎಸ್. ನಂ. 83/2022 ಡಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 20.3.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ವಿ.ಎಸ್ ವಕೀಲರಿಂದಃ**

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನಾನು ಮೊದಲಿನಿಂದಲೂ ವ್ಯವಸಾಯ ಮಾಡಿಕೊಂಡಿರುತ್ತೇನೆ. ನನ್ನ ತಂದೆಯೂ ಸಹ ವ್ಯವಸಾಯ ಮಾಡುತ್ತಿದ್ದರು. ವ್ಯವಸಾಯ ಹೊರತುಪಡಿಸಿ ಬೇರೆ ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ವಾದಿಯು ನನ್ನ ಮೊದಲನೇ ಹೆಂಡತಿಯ ಮಗಳು ಎಂದರೆ ಸರಿ. ವಾದಿಯು ಯಾವ ಪರಿಹಾರ ಕೋರಿ ದಾವೆ ಹಾಕಿರುತ್ತಾರೆ ಎಂದು ಗೊತ್ತಿರುತ್ತದೆ. ಸಾಕ್ಷಿದಾರರು ಮುಂದುವರಿದು ನಾನು ಮೊದಲೇ ವಾದಿಗೆ ಭಾಗ ನೀಡಿರುತ್ತೇನೆ ಎನ್ನುವರು. ವಿಭಾಗವಾಗಿರುವ ಬಗ್ಗೆ ವಿಭಾಗಪತ್ರ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು, ಆದರೆ ಅದು ನೋಂದಣಿಯಾಗಿರುವುದಿಲ್ಲ. ನನ್ನ ತಕರಾರು ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ನಾನು ದಾವಆಸ್ತಿಗಳಲ್ಲಿ ಮೊದಲಿನಿಂದಲೂ ವ್ಯವಸಾಯ ಮಾಡಿಕೊಂಡಿರುತ್ತೇನೆ. ನನ್ನ ತಂದೆಯವರು ಸಹ ದಾವಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಿದ್ದರು. ದಾವ 5 ನೇ ಐಟಂ ಆಸ್ತಿಯಲ್ಲಿ ನಾನು ಹುಟ್ಟಿದಾಗಿನಿಂದ ವಾಸವಾಗಿರುತ್ತೇನೆ. ನನ್ನ ತಂದೆ ಮತ್ತು ಅವರ ಎಲ್ಲ ಮಕ್ಕಳು ಅದೇ ಮನೆಯಲ್ಲಿ ವಾಸವಾಗಿರುತ್ತಾರೆ. ನಾನು ಸ್ವಯಾರ್ಜಿತವಾಗಿ ಖರೀದಿಸಿರುವ ಆಸ್ತಿಯಲ್ಲಿ ಮನೆ ಮಾಡಿಕೊಂಡು ವಾಸವಾಗಿರುತ್ತೇನೆ. ಸದರಿ ಆಸ್ತಿಯನ್ನು ಖರೀದಿ ಮಾಡಿರುವ ಬಗ್ಗೆ ಕ್ರಯಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಗ್ರಾಮ ಪಂಚಾಯಿತಿಯಲ್ಲಿ ನನ್ನ ಅಣ್ಣ ನನಗೆ ಬರೆದುಕೊಟ್ಟಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸರ್ವೆ ನಂ.58 ರಲ್ಲಿ ಒಟ್ಟು 3-22 ಎಕರೆ ಇದ್ದು ಅದರಲ್ಲಿ ನನ್ನ ಚಿಕ್ಕಪ್ಪನಿಗೆ 1-31 ಎಕರೆ ಜಮೀನು ಹೋಗಿರುತ್ತದೆ. ಉಳಿಕೆ 1-31 ಎಕರೆ ನಮ್ಮ ಕುಟುಂಬಕ್ಕೆ ಬಂದಿರುತ್ತದೆ. ದಾವ 3 ಮತ್ತು 4 ನೇ ಐಟಂ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಲು ತೊಂದರೆ ಇರುವುದಿಲ್ಲ. ದಾವ 3 ಮತ್ತು 4 ನೇ ಐಟಂ ಆಸ್ತಿಗಳು ನಿಪಿ7 ರಂತೆ ಎಂ.ಆರ್ 5/1995-96 ರಂತೆ ನನ್ನ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ನಿಪಿ7 ರಲ್ಲಿ ಪಿತ್ರಾರ್ಜಿತ ಮತ್ತು ಹಕ್ಕು ಬದಲಾವಣೆ ಮೇರೆಗೆ ಖಾತೆಯಾಗಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ2 ರಲ್ಲಿ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಸದರಿ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎನ್ನುವರು. ನನ್ನ ಮಗನನ್ನು ಬೋರೇಗೌಡ ಎಂದು

ಮಾತ್ರ ಕರೆಯುತ್ತಾರೆ, ಕುಮಾರ ಎಂದು ಕರೆಯುವುದಿಲ್ಲ. ನನ್ನ ಮಗನ ಹೆಸರು ಕುಮಾರ ಅಲಿಯಾಸ್ ಬೋರೇಗೌಡ ಆಗಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.